**1 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು**

**ಎಸ್.ಸಿ. ನಂ.192/2022**

P.W : 4
C.W: 4

**ದಿನಾಂಕ 25.10.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**

**ಹೆಸರು** : ಚಂದ್ರಹಾಸ್

**ತಂದೆಯ ಹೆಸರು** : ಲಿಂಗೇಗೌಡ

**ವಯಸ್ಸು** : 42 ವರ್ಷ

**ವೃತ್ತಿ** : ಪಿ.ಡಿ.ಒ. ಯಡಿಯೂರು ಗ್ರಾಮ ಪಂಚಾಯಿತಿ ,
ಕುಣಿಗಲ್ ತಾಲ್ಲೂಕು

**ವಾಸಸ್ಥಳ** : ಕುಣಿಗಲ್

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

**1 ಮತ್ತು 2 ನೇ ಆರೋಪಿಗಳನ್ನು ವಿಸಿ ಮೂಲಕ ಹಾಜರುಪಡಿಸಿದ್ದು ನ್ಯಾಯಾಲಯದ ಕಾರ್ಯ ಕಲಾಪಗಳು ಆಡಿಯೋ ಮತ್ತು ವಿಡಿಯೋ ಮೂಲಕ ಕೇಳಿಸುತ್ತಿರುವ ಮತ್ತು ಕಾಣಿಸುತ್ತಿರುವ ಬಗ್ಗೆ ದೃಡಪಡಿಸಿಕೊಂಡು ಸಾಕ್ಷಿ ವಿಚಾರಣೆ ಪ್ರಾರಂಬಿಸಲಾಯಿತು.**

ನಾನು ಆಗಸ್ಟ 2021 ರಿಂದ ಆಗಸ್ಟ 2023 ರವರೆಗೆ ನಾನು ಹೆಬ್ಬೂರು ಗ್ರಾಮ ಪಂಚಾಯಿುತಿಯಲ್ಲಿ ಪಿಡಿಒ ಆಗಿ ಕಾಯ ನಿರ್ವಹಿಸುತ್ತಿದ್ದೆ. ನಾನು ಕಣಕುಪ್ಪೆ ಗ್ರಾಮ ಪಂಚಾಯಿತಿಯಲ್ಲಿ ಪ್ರಭಾರ

ಪಿಡಿಒ ಅಗಿ ಮೇಲೆ ಹೆಳಿದ ಅವಧಿಯಲ್ಲಿ ಕಾಶಯ ನಿರ್ವಹಿಸಿದ್ದೇನೆ. ಚಾ.ಸಾ.5 ನವೀನ್ ಬಿಲ್ ಕಲೆಕ್ಟರ್ ಆಗಿ ಕಾರ್ಯ ನಿರ್ವ ಹಿಸುತ್ತಿದ್ದರು.

2. ದಿ.17.08.2022 ರಂದು ನಮ್ಮ ತುಮಕೂರು ತಾಲ್ಲೂಕು ಪಂಚಾಯಿತಿಯ ಕಾರ್ಯ ನಿರ್ವಹಣಾ ಅಧಿಕಾರಿಯ ಮೌಖಿಕ ಸೂಚನೆಯ ಮೆರೇರೆಗೆ ಜಯನಗರ ಪೋಲೀಸ್ ಠಾಣೆಯ ಪ್ರಕರಣದಲ್ಲಿ ಸ್ಥಳ ಮಹಜರ್ ವೇಳೆ ಹಾಜರಿರುವಂತೆ ಸೂಚನೆ ನೀಡಿದ್ದ ಕಾರಣ ನಾನು ಮತ್ತು ಚಾ.ಸಾ.5 ಸಾಸಲು ಗ್ರಾಮದ ಸಾಸಲು ಕೆರೆಯ ಬಳಿ ಮಧ್ಯಾಹ್ನ 12.00 ಗಂಟೆಗೆ ಹಾಜರಾಗಿದ್ದೆವು. ಪೋಲೀಸರು ಸ್ಥಳದಲ್ಲಿ ಹಾಜರಿದ್ದು ಕೊಲೆ ಪ್ರಕರಣದ ಬಗ್ಗೆ ಮಾಹಿತಿ ನಿಡೀದರು. ಸ್ಥಳದಲ್ಲಿ ಪೋಲೀಸರು ನನಗೆ ನೋಟೀಸ್ ಜಾರಿ ಮಾಡಿದ್ದರು. ಸ್ಥಳದಲ್ಲಿ ಒಬ್ಬ ಹೆಂಗಸು ಸಹಾ ಹಾಜರಿದ್ದರು. ಸ್ಥಳದಲ್ಲಿ ಹಾಜರಿದ್ದ ಮಹಿಳೆ ಬೈಕ್ ಮತ್ತು ಬಟ್ಟೆಗಳು ಹಾಗೂ ಫೋನ್ ನ್ನು ಬಿಸಾಕಿದ್ದ ಸ್ಥಳ ಸಾಸಲು ಕೆರೆ ಎಂದು ತೋರಿಸಿದರು. ಈಜು ಬರುವ ವ್ಯಕ್ತಿಗಳನ್ನು ಕೆರೆಯ ಬಳಿಗೆ ಪೋಲೀಸರು ಕರೆಸಿದ್ದರು. ಸದರಿ ವ್ಯಕ್ತಿಗಳನ್ನು ಕೆರೆಯಲ್ಲಿ ಇರುವ ಬೈಕ್ ನ್ನು ಪೋಲೀಸರು ಪತ್ತೆ ಮಾಡುವಂತೆ ಹೇಳಿದರು. ಈಜು ಬರುವ ವ್ಯಕ್ತಿಗಳಿಬ್ಬರೂ ಕೆರೆಯಲ್ಲಿ ಈಜು ಮಾಡಿ ಕೆರೆ ದಡದಿಂದ 10 ಅಡಿ ದೂರದಲ್ಲಿ ಕೆರೆಯಲ್ಲಿದ್ದ ಬೈಕ್ ನ್ನು ದಡಕ್ಕೆ ತಂದಿದ್ದರು. ನಾನು ಸದರಿ ಬೈಕ್ ನ್ನು ಗಮನಿಸಿದಾಗ ಹೊಂಡಾ ಕಂಪನಿಗೆ ಸೇರಿದ ಕಪ್ಪು ಬಿಳಿ ಬಣ್ಣದ ಬೈ ಕ್ ಆಗಿತ್ತು. ನೀರಿನ ಅಲೆಗಳಿಗೆ

ಬಟ್ಟೆಗಳು ದಡದ ಅಂಚಿನಲ್ಲಿಯೆಎೀ ಇತ್ತು. ಅ ಬಟ್ಟೆಗಳನ್ನು ಸಹಾ ಪೋಲೀಸರು ತಮ್ಮ ವಶಕ್ಕೆ ಪಡೆದರು. ಸದರಿ ಬಟ್ಟೆಗಳನ್ನು ಗಮನಿಸಿದಾಗ ಒಂದು ಜೀನ್ಸ್ ಪ್ಯಾಂಟ್ ಮತ್ತು ಒಂದು ಶರ್ಟ್ ಇತ್ತು. ಸದರಿ ಬಟ್ಟೆಗಳು ಒದ್ದೆಯಾಗಿದ್ದು ರಕ್ತದ ಕಲೆ ಇತ್ತು, ಸದರಿ ಬಟ್ಟೆಗಳನ್ನು ಪೋಲೀಸರು ಬಿಳಿಯ ಬಟ್ಟೆಯಲ್ಲಿ ಸುತ್ತಿ ಅಮಾನತ್ತುಪಡಿಸಿದರು. ಮೊಬೈಲ್ ಹುಡುಕಾಡಿದರೂ ಸಿಗಲಿಲ್ಲ.

3. ಸದರಿ ವಸ್ತುಗಳನ್ನು ಅಮಾನತ್ತುಪಡಿಸಿದ ನಂತರ ಜಯನಗರ ಪೋಲೀಸ್ ಠಾಣೆಗೆ ವಾಪಸ್ ಬಂದೆವು. ಪೋಲೀಸ್ ಠಾಣೆಗೆ ಎಫ್ ಎಸ್.ಎಲ್ ಅಧಿಕಾರಿಗಳು ಬಂದಿದ್ದರು. ಬೈಕ್ನಲ್ಲಿದ್ದ ರಕ್ತದ ಕಲೆಗಳನ್ನುಎಫ್ ಎಸ್.ಎಲ್ ಅಧಿಕಾರಿಗಳು ಸಂಗ್ರಹಿಸಿದರು. ಪೋಲೀಸ್ ಠಾಣೆಯಲ್ಲಿ ಮಧ್ಯಾಹ್ನ 3.00 ಗಂಟೆಯವರೆಗೆ ಪೋಲೀಸ್ ಠಾಣೆಯಲ್ಲಿ ಮಹಜರ್ ಕ್ರಮ ಅನುಸರಿಸಿದರು. ಬರವಣಿಗೆ ಮಾಡಿದ ಪಂಚನಾಮೆಯಲ್ಲಿ ಪೋಲೀಸರು ನನ್ನ ಸಹಿ ಪಡೆದಿದ್ದರು. ಸಾಕ್ಷಿ ಪಂಚನಾಮೆ ಮತ್ತು ತಮ್ಮ ಸಹಿ ನೋಡಿ ಗುರುತಿಸಿದ್ದು ಪಂಚನಾಮೆಯನ್ನು ನಿ.ಪಿ.4 ಮತ್ತು ಸಾಕ್ಷಿಯ ಸಹಿಯನ್ನು ನಿ.ಪಿ.4(ಎ) ಎಂದು ಗುರುತು ಮಾಡಲಾಯಿತು. ಪೋಲೀಸರಎ ಅಮಾನತ್ತು ಪಡಿಸಿದ ವಸ್ತುಗಳನ್ನು ನಾನು ನೋಡಿದರೆ ಗುರುತಿಸಬಲ್ಲೆ.

(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿಯ ಮೂಲಕ ನಿಶಾನೆಯಾಗಿ ಗುರುತು ಮಾಡಲು ಬಟ್ಟೆ ಚೀಲದ ಮೇಲೆ ಹಾಕಿರುವ ಮೊಹರು ತೆರೆಯಲು ಅನುಮತಿ ಕೋರಿದ್ದು, ಅನುಮತಿಸಲಾಯಿತು)

**1 ಮತ್ತು 2 ನೇ ಆರೋಪಿಗಳನ್ನು ವಿಸಿ ಮೂಲಕ ಹಾಜರುಪಡಿಸಿದ್ದು ನ್ಯಾಯಾಲಯದ ಕಾರ್ಯ ಕಲಾಪಗಳು ಆಡಿಯೋ ಮತ್ತು ವಿಡಿಯೋ ಮೂಲಕ ಕೇಳಿಸುತ್ತಿರುವ ಮತ್ತು ಕಾಣಿಸುತ್ತಿರುವ ಬಗ್ಗೆ ದೃಡಪಡಿಸಿಕೊಂಡು ಸಾಕ್ಷಿ ವಿಚಾರಣೆ ಪ್ರಾರಂಬಿಸಲಾಯಿತು.**

ಸಾಕ್ಷಿ ನೀಲಿ ಬಣ್ಣದ ಒಂದು ಜೀನ್ಸ್ ಪ್ಯಾಂಟ್ ನ್ನು ನೋಡಿ ಗುರುತಿಸಿದ್ದು ಅದನ್ನು ಮು.ಮಾ.3 ಎಂದು, ಸಾಕ್ಷಿ ಒಂದು ತುಂಬು ತೋಳಿನ ನೀಲಿ ಬಣ್ಣದ ರೆಡಿಮೇಡ್ ಶರ್ಟ್ ನ್ನು ನೋಡಿ ಗುರುತಿಸಿದ್ದು ಅದನ್ನು ಮು.ಮಾ.4 ಎಂದು ಗುರುತು ಮಾಡಲಾಯಿತು. ಮು.ಮಾ.3 ಮತ್ತು 4 ನ್ನು ಅಮಾನತ್ತುಪಡಿಸಿರುವ ಬಿಳಿ ಬಟ್ಟೆ ಚೀಲದ ಮೇಲೆ ಅಂಟಿಸಿರುವ ಮಹಜರ್ ಚೀಟಿಯಲ್ಲಿ ಸಾಕ್ಷಿ ತನ್ನ ಸಹಿಗಳನ್ನು ನೋಡಿ ಗುರುತಿರುತ್ತಾರೆ. ನಾನು ಅಮಾನತ್ತುಪಡಿಸಿದ ಬೈಕ್‌ನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ಮಹಜರ್ ವೇಳೆ ತೆಗೆದಿದ್ದ ಬೈಕ್ ಒಂದು ಪೋಟೋ ನೋಡಿ ಗುರುತಿಸಿದ್ದು ಅದನ್ನು ನಿ.ಪಿ.5 ಎಂದು ಗುರುತು ಮಾಡಲಾಯಿತು. ನಿ,ಪಿ.5 ರ ಪೋಟೋದಲ್ಲಿ ಪೊಟೋದ ಎಡಭಾಗದಿಂದ ಕಂಡುಬರುವ 2 ನೇ ವ್ಯಕ್ತಿ ನಾನು ಎಂದು ನೋಡಿ ಗುರುತಿಸಿರುತ್ತಾರೆ. ಕೆರೆಯ ಬಳಿ ವಸ್ತುಗಳನ್ನು ಅಮಾನತ್ತುಪಡಿಸುವ ವೇಳೆ ಪೋಲೀಸರು ಪೋಟೋಗಳನ್ನು ತೆಗೆದಿದ್ದರು. ಸದರಿ ಪೋಟೋಗಳನ್ನು ನಾನು ನೋಡಿದರೆ ಗುರುತಿಸಬಲ್ಲೆ.

5. ಎಫ್.ಎಸ್.ಎಲ್ ಅಧಿಕಾರಿಗಳು, ಪೋಲೀಸರು, ಕೆರೆಯ ಬಳಿ ಹಾಜರಿದ್ದ ಹೆಂಗಸು, ನಾನು ಮತ್ತು ಚಾ.ಸಾ.5 ಕ್ಯಾತ್ಸಂದ್ರ ಗ್ರಾಮದ ರೈಲ್ವೆ ಗೇಟ್ ನ ಬಳಿಗೆ ಹೋಗಿದ್ದೆವು. ಸ್ಥದಳಲ್ಲಿ ಹಾಜರಿದ್ದ ಹೆಂಗಸು ಕೊಲೆ ಮಾಡಿದ ಸ್ಥಳ ಎಂದು ನಮಗೆ ತೋರಿಸಿದರು. ಸದರಿ ಸ್ಥಳದಲ್ಲಿ ಹುಲ್ಲು ಬೆಳೆದಿತ್ತು. ಸದರಿ ಸ್ಥಳದಲ್ಲಿ ಹೆಂಗಸು ಒಂದು ಕಲ್ಲನ್ನು ತೋರಿಸಿದರು. ಸದರಿ ಕಲ್ಲನ್ನು ಕೊಲೆ ಮಾಡಲು ಬಳಕೆ ಮಾಡಿದ್ದು ಎಂದು ಅದೇ ಹೆಂಗಸು ತೋರಿಸಿದರು. ಕಲ್ಲಿನ ಮೇಲಿದ್ದ ರಕ್ತದ ಕಲೆಗಳನ್ನು ಎಫ್.ಎಸ್.ಎಲ್ ಅಧಿಕಾರಿಗಳು ಸ್ಥಳದಲ್ಲಿ ಸಂಗ್ರಹಿಸಿದರು. ಅಮಾನತ್ತು ಪಡಿಸಿದ ಕಲ್ಲನ್ನು ನೋಡಿದರೆ ಗುರುತಿಸಬಲ್ಲೆ. ಸ್ಥಳದಲ್ಲಿದ್ದ ಮಣ್ಣನ್ನು ಪೋಲೀಸರು ಸಂಗ್ರುಗಿಸಿದ್ದರು. ಪೋಲೀಸರು ಸ್ಥಳದಲ್ಲಿ ಮಹಜರ್ ಮಾಡಿ ಸಂಗ್ರಹಿಸಿದ ವಸುಗಳನ್ನು ಅಮಾನತ್ತುಪಡಿಸಿದರು. ಮದ್ಯಾಹ್ನ 3.00 ರಿಂದ 04.30 ರವರೆಗೆ ಪೋಲೀಸರು ಪಂಚನಾಮೆ ಕ್ರಮ ಅನುಸರಿದರು. ಮಹಜರ್ ವೇಳೆ ಪೋಲೀಸರು ಪೋಟೋ ತೆಗೆದಿದ್ದರು. ಸಾಕ್ಷಿ ಮಹಜರ್ ಮತ್ತು ಸಹಿಯನ್ನು ನೋಡಿ ಗುರುತಿಸಿದ್ದು, ಮಹಜರ್ ನ್ನು ನಿ.ಪಿ.6 ಮತ್ತು ಸಾಕ್ಷಿಯ ಸಹಿಯನ್ನು ನಿ.ಪಿ.6(ಎ) ಎಂದು ಗುರುತು ಮಾಡಲಾಯಿತು. ಕೆರೆಯ ಬಳಿ ಬೈಕ್ ಮತ್ತು ಬಟ್ಟೆ ಯನ್ನು ಅಮಾನತ್ತು ಪಡಿಸುವ ವೇಳೆ ಪೋಲೀಸರು ತೆಗೆಸಿದ 4 ಪೋಟೋಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದುಅವುಗಳನ್ನು ನಿ.ಪಿ.7 ರಿಂದ 10 ಎಂದು ಗುರುತು

ಮಾಡಲಾಯಿತು. ನಿ,ಪಿ.7 ರ ಪೋಟೋದಲ್ಲಿ ಪೊಟೋದ ಬಲ ಭಾಗದಿಂದ ಕಂಡುಬರುವ 4 ನೇ ವ್ಯಕ್ತಿ ನಾನು ಎಂದು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ನಿ,ಪಿ.8 ರ ಪೋಟೋದಲ್ಲಿ ಪೊಟೋದ ಬಲ ಭಾಗದಿಂದ ಕಂಡುಬರುವ 2 ನೇ ವ್ಯಕ್ತಿ ನಾನು ಎಂದು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ನಿ,ಪಿ.9 ರ ಪೋಟೋದಲ್ಲಿ ಪೊಟೋದ ಬಲ ಭಾಗದಿಂದ ಕಂಡುಬರುವ 2 ನೇ ವ್ಯಕ್ತಿ ನಾನು ಎಂದು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

6. ನಿ.ಪಿ.4 ಮತ್ತು 6 ಮಹಜರ್ ವೇಳೆ ಪೋಲೀಸರು ತೆಗೆದಿದ್ದ ಪೋಟೋಗಳು ಮತ್ತು ವಿಡಿಯೋಗ ಸಂಬಂಧಿಸಿದಂತೆ ಸಿ.ಡಿ.ಯನ್ನು ತೆರೆದ ನ್ಯಾಯಾಲಯದಲ್ಲಿ ಸಿ.ಡಿ ಡ್ರೈವ್ ಮೂಲಕ ಪ್ಲೇ ಮಾಡಿ ನಂತರ ಪೋಟೋಗಳು ಮತ್ತು ವಿಡಿಯಾ಼ ಚಿತ್ರೀಕರಣವನ್ನು ಸಾಕ್ಷಿ ವೀಕ್ಷಿಸಿದ ಸಿ.ಡಿ. ಯನ್ನು ನಿ.ಪಿ.11 ಎಂದು ಗುರುತು ಮಾಡಲಾಯಿತು. ಸಿ.ಡಿಯ್ಲ್ಲ ಸಾಕ್ಷಿ ತನ್ನನ್ನು ಮತ್ತು 1 ನೇ ಆರೋಪಿಯನ್ನು ಹಾಗೂ ಚಾ.ಸಾ.5 ರವರನ್ನು ನೂಡಿ ಗುರುತಿಸಿರುತ್ತಾರೆ.

7. ಪೋಲೀಸರು ಅಮಾನತ್ತುಪಡಿಸಿದ ಕಲ್ಲನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಮು.ಮಾ.5 ಎಂದು ಗುರುತು ಮಾಡಲಾಯಿತು. ಒಂದು ಕಲ್ಲು ಇರುವ ಪೋಟೋವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ.12 ಎಂದು ಗುರುತು ಮಾಡಲಾಯಿತು.

**(ಬೈಕ್ ಮತ್ತು ಕಲ್ಲಿನ ಮೇಲೆ ಇರುವ ರಕ್ತದ ಕಲೆಗಳನ್ನು ಸಂಗ್ರಹಿಸಿ ಎಫ್.ಎಸ್.ಎಲ್ ಗೆ ಕಳುಹಿಸಿದ ಮೊಹರು ಮಾಡಿದ ಲಕೋಟೆಯಲ್ಲಿರುವ ವಸ್ತುಗಳನ್ನು ನಿಶಾನೆಯಾಗಿ ಗುರುತು ಮಾಡಲು ಲಕೋಟೆಯ ಮೇಲಿರುವ ಮೊಹರು ತೆರೆಯಲು ಅನುಮತಿಸಲಾಯಿತು )**

ಮಹಜರ್ ವೇಳೆ ಬೈಕ್ ನ ಹಿಂಭಾಗದ ಸೀಟ್ ನ ರಕ್ತದ ಕಲೆ ಇದ್ದ ಬಗ್ಗೆ ಸಂಗ್ರಹಿಸಿದ್ದ ಸೀಟ್ ನ ಚೂರನ್ನುಸಾಕ್ಷಿ ನೋಡಿ ಗುರುತಿಸಿದ್ದು ಮು.ಮಾ.6 ಎಂದು ಗುರುತು ಮಾಡಲಾಯಿತು. ಮಹಜರ್ ವೇಳೆ ಬೈಕ್ ನ ಪೆಟ್ರೋಲ್ ಟ್ಯಾಂಕ್ ನ ಮೇಲಿದ್ದ ಕವರ್ ಗೆ ಅಂಟಿದ್ದ ರಕ್ತದ ಕಲೆಯನ್ನು ಸಂಗ್ರಹಿಸಿದ್ದ ಕವರ್ ನ ಚೂರನ್ನು ಸಾಕ್ಷಿ ನೋಡಿ ಗುರುತಿಸಿದ್ದು ಮು.ಮಾ.7 ಎಂದು ಗುರುತು ಮಾಡಲಾಯಿತು. ಮಹಜರ್ ವೇಳೆ ಸಂಗರಹಿಸಿದ್ದ control swab ಚೂರನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಮು.ಮಾ.8 ಎಂದು ಗುರುತು ಮಾಡಲಾಯಿತು. ಮಹಜರ್ ವೇಳೆ ಕಲ್ಲಿನ ಕೆಳಭಾಗದಿಂದ ಸಂಗ್ರಹಿಸಿದ ರಕ್ತ ಹದ್ದಿದ್ದ ಹತ್ತಿಯ ಚೂರನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಮು.ಮಾ.9 ಎಂದು ಗುರುತು ಮಾಡಲಾಯಿತು. ಮಹಜರ್ ವೇಳೆ ಅಮಾನತ್ತುಪಡಿಸಿದ್ದ ಕಲ್ಲಿನ ಅಂಚಿನಿಂದ ಸಂಗ್ರಹಿಸಿದ ರಕ್ತ ಹದ್ದಿದ್ದ ಹತ್ತಿಯ ಚೂರನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಮು.ಮಾ.10 ಎಂದು ಗುರುತು ಮಾಡಲಾಯಿತು. ಮಹಜರ್ ವೇಳೆ ಅಮಾನತ್ತುಪಡಿಸಿದ್ದ ಕಲ್ಲಿನ ಮೇಲ್ಭಾಗದಿಂದ ಸಂಗ್ರಹಿಸಿದ ರಕ್ತ ಹದ್ದಿದ್ದ ಹತ್ತಿಯ ಚೂರನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಮು.ಮಾ.11

ಎಂದು ಗುರುತು ಮಾಡಲಾಯಿತು. ಮಹಜರ್ ವೇಳೆ ಅಮಾನತ್ತುಪಡಿಸಿದ್ದ ಕಲ್ಲಿನ ಕೆಳಭಾಗದಲ್ಲಿದ್ದ ರಕ್ತ ಮೆತ್ತಿದ್ದ ಮಣ್ಣನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಮು.ಮಾ.12 ಎಂದು ಗುರುತು ಮಾಡಲಾಯಿತು. ಮಹಜರ್ ವೇಳೆ ಅಮಾನತ್ತುಪಡಿಸಿದ್ದ ಕಲ್ಲಿನ ಕೆಳಭಾಗದಲ್ಲಿದ್ದ ಸಾದಾ ಮಣ್ಣನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಮು.ಮಾ.13 ಎಂದು ಗುರುತು ಮಾಡಲಾಯಿತು. ಮಹಜರ್ ವೇಳೆ ಸಂಗ್ರಹಿಸಿದ್ದ control swab ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಮು.ಮಾ.14 ಎಂದು ಗುರುತು ಮಾಡಲಾಯಿತು. ಮು.ಮಾ. 6 ರಿಂದ 14 ರ ಕವರ್ ನ ಮೇಲೆ ಅಂಟಿಸಿರುವ ಮಹಜರ್ ಚೀಟಿಯಲ್ಲಿ ಸಾಕ್ಷಿ ತನ್ನ ಸಹಿಗಳನ್ನು ನೋಡಿ ಗುರುತಿಸಿರುತ್ತಾರೆ. ಬೈಕ್ ಅಮಾನತ್ತುಪಡಿಸಿದ ವೇಳೆ ಹಾಜರಿದ್ದ ಹೆಂಗಸು ಸದರಿ ಬೈಕ್ ಮೃತ ವ್ಯಕ್ತಿಗೆ ಸೇರಿದ್ದು ಮಹಜರ್ ವೇಳೆ ತಿಳಿಸಿದ್ದರು. ಅಮಾನತ್ತುಪಡಿಸಿದ ಮು.ಮಾ.3 ಮತ್ತು 4 ಶರ್ಟ್ ಮತ್ತು ಪ್ಯಾಂಟ್ 2 ನೇ ಆರೊಪಿಗೆ ಸೇರಿದ್ದು ಎಂದು ಮಹಜರ್ ವೇಳೆ ಹಾಜರಿದ್ದ ಹೆಂಗಸು ತಿಳಿಸಿದರು. ಮಹಜರ್ ವೇಳೆ ಹಾಜರಿದ್ದ ಹೆಂಗಸನ್ನು ನಾನು ನೋಡಿದರೆ ಗುರುತಿಸಬಲ್ಲೆ. ವಿ.ಸಿ. ಮೂಲಕ ಹಾಜರುಪಡಿಸಿದ 1 ನೇ ಆರೋಪಿ ಲಕ್ಷ್ಮಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ, ಮಹಜರ್ ವೇಳೆ ನಾನು ಹಾಜರಿದ್ದ ಬಗ್ಗೆ ಪೋಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೇನೆ.

ನ್ಯಾಯಾಲಯದ ಅವರಣದಲ್ಲಿರುವ ಬೈಕ್ ನ್ನು ಸಾಕ್ಷಿ ನೋಡಿದ್ದು ಅದನ್ನು ಮು.ಮಾ.15 ಎಂದು ಗುರುತು ಮಾಡಲಾಯಿತು

**ಪಾಟೀ ಸವಾಲು ಆರೋಪಿಗಳ ಪರ ಶ್ರೀ .ಸಿಡಿಸಿ ವಕೀಲರಿಂದ**

ಆರೋಪಿ ಪರ ವಕೀಲರು ಹಾಜರಿದ್ದು ಎಫ್ಎಸ್.ಎಲ್ ವರದಿಯನ್ನು ಈ ದಿನ ನ್ಯಾಯಾಲಯದಲ್ಲಿ ಸ್ವೀಕರಿಸಿದ್ದು ಮತ್ತು ನಿಶಾನೆಯಾಗಿ ಗುರುತಾಗಿರುವ ಪೋಟೋಗಳು ತಮ್ಮ ಕಡತದಲ್ಲಿ ಲಭ್ಯವಿಲ್ಲದೇ ಇರುವುದರಿಂದ ಸದರಿ ಪೋಟೋಗಳನ್ನು ಸ್ವೀಕರಿಸಿ ನಂತರ ಪಾಟೀ ಸವಾಲು ಮಾಡುವುದಾಗಿ ನುಡಿದಿದ್ದು ಪಾಟೀ ಸವಾಲಿಗಾಗಿ ಮುಂದೂಡಲಾಯಿತು

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

1 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು.